<u>ಅಪರ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಹೊಳಲ್ಕೆರೆ</u>

ಉಪಸ್ಥಿತರುಃ ನಿರುಪಮಾ. ಆರ್.ಡಿ.
ಬಿ.ಎ. ಎಲ್.ಎಲ್.ಬಿ.,
ಅಪರ ಸಿವಿಲ್ ಮತ್ತು ನ್ಯಾಯಿಪಕ ದಂಡಾಧಿಕಾರಿಗಳು,
ಹೊಳಲ್ಕೆರೆ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **1070/2024**

<u>ಫಿರ್ಯಾದುದಾರರುಃ</u> ಕರ್ನಾಟಕ ಸರ್ಕಾರದ ಪರವಾಗಿ ಚಿತ್ರಹಳ್ಳಿ ಗೇಟ್ ಪೋಲಿಸ್ ಠಾಣೆ.

ವಿರುದ್ಧ

<u>ಆರೋಪಿ</u> ರವಿಕುಮಾರ ತಂದೆ ರಂಗಪ್ಪ
29 ವರ್ಷ
ಜಿರಾಯ್ತಿ ಕೆಲಸ
ವಾಸಃ ಕಸವನಹಳ್ಳಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು.

<u>ದೋಷಾರೋಪಣೆ</u>

ನಾನು ನಿರುಪಮಾ. ರೇ.ಢಂಗ. ಪ್ರಭಾರೆ ಅಪರ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು, ಹೊಳಲ್ಕೆರೆ ಆಪಾದಿಸುವುದೇನೆಂದರೆ,

ದಿನಾಂಕ 12/06/2024 ರಂದು ಸಂಜೆ 5-30 ಗಂಟೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಕಸವನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಜಯಮ್ಮ ಇವರ ಜಮೀನಿನ ಮುಂಭಾಗದ ಟಾರ್ ರಸ್ತೆಯಲ್ಲಿ ಚಾಸಾ-1 ರವರು ತಮ್ಮ ಬೈಕಿನಲ್ಲಿ ತಮ್ಮ ಗ್ರಾಮಕ್ಕೆ ಹೋಗುವಾಗ ಅಡ್ಡಗಟ್ಟಿ ನಿಲ್ಲಿಸಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.341 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ-1 ರವರಿಗೆ ಏನೋ ಸೂಳೇ ಮಗನೇ ಬೋಳಿ ಮಗನೇ ಎಂದು ಬಾಯಿಗೆ ಬಂದಂತೆ ಅವ್ಯಾಚ ಶಬ್ದಗಳಿಂದ ಬೈದಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ-1 ರವರಿಗೆ ಕೈ ಕಾಲುಗಳಿಂದ ಮೈಕೈಗೆ ಹೊಡೆದು ಹೊಡೆದು ನೋವುಂಟುಪಡಿಸಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ-1 ರವರ ಎಡಕೈ ಹಿಡಿದುಕೊಂಡು ಕಿರುಬೆರಳಿಗೆ ಬಾಯಿ ಹಾಕಿ ಹಲ್ಲಿನಿಂದ ಕಚ್ಚಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ನನ್ನ ಹಣವನ್ನು ವಾಪಸ್ ಕೊಡದೇ ಇದ್ದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ನಿನ್ನ ಪ್ರಾಣ ತೆಗೆಯುತ್ತೆನೆಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ.

ನೀವು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ದಿನಾಂಕ:23/12/2025
ಸ್ಥಳ : ಹೊಳಲ್ಕೆರೆ

ಪ್ರಭಾರೆ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಳಲ್ಕೆರೆ.